Seshadripuram Educational Trust

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು-560020

# Vani

## The Voice of Excellence

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 29
Edition - 4
April - 2017



4 Silver Jubilee Inaugural Address By Prof. Muhammed Yunus




5-7 Womens Day Special




8 Republic Day 2017

राष्ट्रीय सेवा योजना
NATIONAL SERVICE SCHEME

12 ವಿಶೇಷ ವಾರ್ಷಿಕ ಶಿಬಿರ




11 Work Shop




10 Blood Donation Camp

**For Internal Circulation only**

Book-Post

To,

If undelivered, please return it to:
Editor, 'Vani' Quaterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

ವ್ಯವಸ್ಥಾಪಕ ಸಂಪಾದಕರು
**ಎನ್.ಆರ್. ಪಂಡಿತಾರಾಧ್ಯ**

ಪ್ರಧಾನ ಸಂಪಾದಕರು
**ಡಾ. ವೂಡೇ ಪಿ. ಕೃಷ್ಣ**

ಸೃಜನಾತ್ಮಕ ಸಲಹೆ
**ನಳಿನಿ ಹರೀಶ್**

ಸಂಪಾದಕರು
**ತೇಜಸ್ವಿನಿ ಪಿ.**
**ಡಾ. ಕಾವ್ಯಶ್ರೀ ಎಚ್.**
**ಶಾಂತಮ್ಮ**

ಸಂಪಾದಕ ಮಂಡಳಿ
ಎಸ್. ಶೇಷ ನಾರಾಯಣ
ಡಬ್ಲ್ಯು.ಜಿ. ರಾಮಕೃಷ್ಣ
ಬಿ.ಎಸ್. ಲೋಕನಾಥ್
ಪಿ.ಸಿ. ನಾರಾಯಣ
ಸರೋಜ ಕೆ.ಎಂ. ನಂಜಪ್ಪ
ಡಾ. ಎಂ. ಪ್ರಕಾಶ್
ಡಾ. ಅನುರಾಧ ರಾಯ್
ಪ್ರೊ. ನಿರ್ಮಲ ಡಿ.
ಡಾ. ಎಸ್.ಎನ್. ವೆಂಕಟೇಶ್
ಪ್ರೊ. ಜಯರಾಮ್
ಡಾ. ಆರ್. ಮಂಜುನಾಥ್
ಪ್ರೊ. ಎನ್. ಸಂತೋಷ್ ಕುಮಾರ್
ಡಾ. ಎಂ.ಆರ್. ಭವಾನಿ
ಡಾ. ಭಾರ್ಗವಿ ವಿ.ಆರ್.
ಡಾ. ಜಿ. ವತ್ಸಲ
ಪ್ರೊ. ಸೌಮ್ಯ ಈರಪ್ಪ
ಪ್ರೊ. ಪಿ. ನಾರಾಯಣ ಸ್ವಾಮಿ
ಪ್ರೊ. ಜಿ.ಕೆ. ಮಂಜುನಾಥ್
ಪ್ರೊ. ಆರ್. ಮಹಾಲಕ್ಷ್ಮಿ
ಡಾ. ಆರ್.ಡಿ. ಸತೀಶ್
ಪ್ರೊ. ಟಿ. ದೊಡ್ಡೇಗೌಡ
ವೆಂಕಟೇಶಯ್ಯ ಎಂ.ಬಿ.
ಗೀತಾ ಎಂ.
ನೇತ್ರಾಮಣಿ
ಕೆ. ಕವಿತಾ
ಮೇರಿ ಥಾಮಸ್
ಸಿರೀಷಾ ಮಾಳ್ವೀಯ

# ಸಂಪಾದಕೀಯ

ಸಮಾಜಕ್ಕೆ ಕೊಡುಗೆಯಾಗುವಂತೆ ಯುವಜನತೆಯನ್ನು ತರಬೇತುಗೊಳಿಸುವುದು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಮಹತ್ವದ ಧ್ಯೇಯಗಳಲ್ಲೊಂದು. ಈ ನಿಟ್ಟಿನಲ್ಲಿ ಸದಾ ಕಾರ್ಯತತ್ಪರವಾಗಿರುವ ದತ್ತಿಯು ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿತು. ಸಣ್ಣಸಾಲಗಳ ಆದ್ಯ ಪ್ರವರ್ತಕ, ಬಡವರ ಬ್ಯಾಂಕ್ ಪರಿಕಲ್ಪನೆಯ ಹರಿಕಾರ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ಈ ಆಚರಣೆಯ ಕೇಂದ್ರಬಿಂದುವಾಗಿದ್ದು ಮತ್ತೊಂದು ವಿಶೇಷ. ಬಡತನ ಮತ್ತು ಹಸಿವಿಗೆ ಯಾವ ಪಠ್ಯದಲ್ಲೂ ಪರಿಹಾರವಿಲ್ಲ ಎಂದರಿತು ಸ್ವತಃ ಕಾರ್ಯೋನ್ಮುಖರಾಗಿ ಗ್ರಾಮೀಣ ಬ್ಯಾಂಕ್‌ಗಳನ್ನು ಸ್ಥಾಪಿಸಿದ ಇವರ ಕಾರ್ಯ ಯುವಜನತೆಗೆ ಯೋಗ್ಯ ಮಾದರಿಯಾಗಿದೆ. ತನ್ನ ಸಾಧನೆಗೆ ಇಡೀ ಜಗತ್ತು ತಲೆದೂಗುವಂತೆ ಮಾಡಿದ ಶ್ರೀಯುತ ಯೂನುಸ್ ನಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ದೇಶವನ್ನು ನಿರ್ಮಾಣ ಮಾಡುವ ಕನಸನ್ನು ಬಿತ್ತಿದ್ದಾರೆ. ಯುವಜನತೆಯಲ್ಲಿ ಶಕ್ತಿಯಿದೆ ಅದರ ಸದ್ಬಳಕೆ ಮಾಡಿಕೊಳ್ಳಬೇಕೆಂಬುದು ಅವರ ಸಲಹೆ. ವಿದ್ಯಾರ್ಥಿಗಳು ಉದ್ಯೋಗವನ್ನು ಅರಸುವುದರ ಬದಲು ತಾವೇ ಸ್ವತಃ ಸೃಷ್ಟಿಸುವವರಾಗಬೇಕೆಂದು ಈ ಸಂದರ್ಭದಲ್ಲಿ ಕರೆ ನೀಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

"ಬಿ ಬೋಲ್ಡ್ ಫಾರ್ ಛೇಂಜ್" ಎಂಬುದು ಈ ಬಾರಿಯ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಘೋಷವಾಕ್ಯವಾಗಿದೆ. ಆದಿಕಾಲದಿಂದಲೂ ಹೆಣ್ಣನ್ನು ತಾಯಿ, ಸೋದರಿ, ಗೆಳತಿ, ಮನದನ್ನೆಯಾಗಿ ಪ್ರೀತಿ, ಮಮತೆ, ತ್ಯಾಗಗಳ ಮೂರ್ತಿಯಾಗಿ ಸಮಾಜವು ಆರಾಧಿಸುತ್ತಲೇ ಬಂದಿದೆ. ನಂತರ ಆ ಹೆಣ್ಣಿನ ಪಾತ್ರ ಶಿಕ್ಷಕಿ, ಶುಶ್ರೂಷಕಿ, ವೈದ್ಯೆ, ರಾಜಕೀಯ ಧುರೀಣೆ ಮುಂತಾದ ಹೊಸರೂಪಗಳನ್ನು ಪಡೆಯಿತು ಈಚಿನ ದಿನಗಳಲ್ಲಿ ಬಾಹ್ಯಾಕಾಶ ವಿಜ್ಞಾನಿಯಾಗಿ, ತತ್ವಜ್ಞಾನಿಯಾಗಿ, ತಂತ್ರಜ್ಞೆಯಾಗಿ ಹೀಗೆ ಇನ್ನೂ ವಿಸ್ತೃತಗೊಂಡಿದೆ. ಹೆಣ್ಣಿಗಂತೂ ಹೊಸ ಜವಾಬ್ದಾರಿಗಳು ಹೊಸ ಸವಾಲುಗಳನ್ನು ಪ್ರತಿನಿತ್ಯವೂ ಅವಳತ್ತ ಎಸೆಯುತ್ತಲೇ ಇರುತ್ತವೆ. ಈ ಜವಾಬ್ದಾರಿಗಳನ್ನು ನಿಭಾಯಿಸಲು ತಯಾರಾಗಬೇಕಿರುವುದು ಹೆಣ್ಣಷ್ಟೇ ಅಲ್ಲ ಸಮಾಜವೂ ಕೂಡ. ನಮ್ಮ ಸಮಾಜ ಹೆಣ್ಣನ್ನು ಈ ರೂಪಗಳಲ್ಲಿ ಸ್ವೀಕರಿಸಲು ಸಾಧ್ಯವಾಗುತ್ತಿದೆಯೇ? ಪ್ರಶ್ನೆಯಿರುವುದು ಈ ದಿಕ್ಕಿನಲ್ಲಿ ಎಷ್ಟರಮಟ್ಟಿಗಿನ ಸಿದ್ಧತೆಗಳನ್ನು ಸಮಾಜವೂ ಮಾಡಿಕೊಳ್ಳುತ್ತಿದೆ ಎಂಬುದು. ಶ್ರೀಮತಿ ಆನಂದಮ್ಮ ಮತ್ತು ಶ್ರೀಮತಿ ಸೀತಮ್ಮ ಎಂಬ ಇಬ್ಬರು ದಿಟ್ಟ ಮಹಿಳೆಯರೇ ಆರಂಭಿಸಿದ ಶೇಷಾದ್ರಿಪುರಂ ಶಿಕ್ಷಣದತ್ತಿಯ ಅಂಗಸಂಸ್ಥೆಗಳಲ್ಲಿ ಮಹಿಳಾ ಸಿಬ್ಬಂದಿಗೆ ಉತ್ತಮ ಪ್ರಾತಿನಿಧ್ಯವನ್ನು ನೀಡಿರುವುದು ಅಭಿನಂದನಾರ್ಹ ಕಾರ್ಯವಾಗಿದೆ.

**- ಸಂಪಾದಕರು**

editorialvani@gmail.com

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2017ರ ಶುಭಾಶಯಗಳು

### ಅಧ್ಯಕ್ಷರ ಸಂದೇಶ

#### ಮಹಿಳಾ ಸಿಬ್ಬಂದಿಗೆ ಹೆಚ್ಚು ಅವಕಾಶ



ಭಾರತೀಯ ಸಂಸ್ಕೃತಿಯಲ್ಲಿ ಖ್ಯಾತ ಮಹಿಳೆಯರು ಝಾನ್ಸಿರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಇಂದಿರಾ ಗಾಂಧಿಯಂತಹ ಮಹಿಳೆಯರು ನಮ್ಮ ದೇಶದ ಅಡಿಗಲ್ಲು. ರನ್ನನ ಅಜಿತ ತೀರ್ಥಂಕರ ಪುರಾಣವನ್ನು ಬರೆಯಿಸಿ ಹಂಚಿದ ಅತ್ತಿಮಬ್ಬೆಯನ್ನು ಮರೆಯಲುಂಟೆ. ಮೇಲಾಗಿ ನಮ್ಮ ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಸಂಸ್ಥಾಪಕರು ಶ್ರೀಮತಿ ಸೀತಮ್ಮ ಮತ್ತು ಆನಂದಮ್ಮ ಎಂಬ ಇಬ್ಬರು ಮಹಿಳೆಯರು.

ನಮ್ಮ ಸಂಸ್ಕೃತಿಯಲ್ಲಿ ಮೂವರು ದೇವರು. ಅವರು ತಂದೆ–ತಾಯಿ ಹಾಗೂ ಉಪಾಧ್ಯಾಯರು. ಇದರಲ್ಲಿ ಮಹಿಳೆಯರ ಪಾತ್ರ ಹಿರಿಯದು. ಮಹಿಳೆ ಇಲ್ಲದೆ ಜಯವಿಲ್ಲ. ಇವಳು ಎರಡು ಕುಟುಂಬಗಳ ಸೇತುವೆಯಾಗುವಳು. ಮಹಿಳೆಗೆ ಮಡಲಕ್ಕಿ ಕಟ್ಟುವ ಮೂಲಕ ಅವಳ ಕರ್ತವ್ಯವನ್ನು ಜ್ಞಾಪಿಸಿಕೊಡಲಾಗುವುದು. ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನಲ್ಲಿ ಮಹಿಳಾ ಸಿಬ್ಬಂದಿಗೆ ಹೆಚ್ಚು ಅವಕಾಶ ಕೊಡಲಾಗಿದೆ. ವಿದ್ಯಾರ್ಥಿನಿಯರ ಸಂಖ್ಯೆಯೂ ಹೆಚ್ಚಿದೆ.

### ಗೌ॥ ಪ್ರಧಾನ ಕಾರ್ಯದರ್ಶಿಗಳ ಸಂದೇಶ

#### ರಾಷ್ಟ್ರದ ಅಭ್ಯುದಯದಲ್ಲಿ ಮಹಿಳೆಯರ ಪಾತ್ರ ಅಪಾರ



ಶಿಕ್ಷಣದ ಪ್ರಮುಖ ಉದ್ದೇಶ ವಿದ್ಯಾರ್ಥಿಗಳ ಜ್ಞಾನ, ಮನೋಭಾವನೆ, ಸಾಮರ್ಥ್ಯ, ಮೌಲ್ಯ ಮತ್ತು ಕೌಶಲ್ಯಗಳನ್ನು ಬೆಳೆಸುವುದು. ಶಿಕ್ಷಣ ನಮ್ಮ ಹಕ್ಕು ಎಂಬ ಅರಿವು ಬಹುಪಾಲು ಮಹಿಳೆಯರಲ್ಲಿ ಇಂದು ಜಾಗೃತವಾಗುತ್ತಿದೆ.

ಭಾರತೀಯ ಇತಿಹಾಸವನ್ನು ಗಮನಿಸಿದಾಗ ಮಹಿಳೆಯರ ಕೊಡುಗೆ ಅಪಾರ. ಅದಕ್ಕೆ ಸಾಕ್ಷಿಯಂತಿರುವವರು ನಮ್ಮ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನ ಸಂಸ್ಥಾಪಕರಾದ ಶ್ರೀಮತಿ ಸೀತಮ್ಮ ಮತ್ತು ಆನಂದಮ್ಮ ಎಂಬ ಇಬ್ಬರು ಉತ್ಸಾಹಿ ಮಹಿಳೆಯರು. ಸಂಸ್ಥೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಲಾಗಿದೆ ಎನ್ನುವುದಕ್ಕಿಂತ ಹೆಚ್ಚು ಆದ್ಯತೆಯನ್ನು ನೀಡಲಾಗಿದೆ ಎಂದರೆ ಉತ್ಪ್ರೇಕ್ಷೆ ಆಗಲಾರದು. ಒಬ್ಬ ವ್ಯಕ್ತಿ ಎಷ್ಟು ದೀರ್ಘಕಾಲ ಬದುಕಿದ್ದ ಎನ್ನುವುದಕ್ಕಿಂತ ಹೇಗೆ ಜೀವಿಸಿದ್ದ ಎಂಬುದು ಹೆಗ್ಗಳಿಕೆ ಹಾಗೂ ಮುಖ್ಯವಾಗುತ್ತದೆ.

ಭಾರತೀಯ ಪುನರುಜ್ಜೀವನದ ಇತಿಹಾಸವನ್ನು ಗಮನಿಸಿದಾಗ ಮಹಿಳೆಯರ ಪಾತ್ರ ಅಪಾರ. ಇತಿಹಾಸದೆಡೆ ಪಕ್ಷಿನೋಟ ಹರಿಸಿದಾಗ ರಾಜಾರಾಮ್ ಮೋಹನ್‌ರಾಯ್ ಮಹಿಳೆಯರ ಅಭಿವೃದ್ಧಿಗೆ ಶ್ರಮಿಸಿದರು. ಸತಿ ಸಹಗಮನ ಪದ್ಧತಿಯನ್ನು ರದ್ದು ಮಾಡಿದರು. ಮಹಾತ್ಮಗಾಂಧಿ, ವಿವೇಕಾನಂದ ಮುಂತಾದ ಯತಿಗಳು, ಗಣ್ಯರು ಮಹಿಳೆಯರ ಶಿಕ್ಷಣಕ್ಕೆ ಒತ್ತುಕೊಡುವುದರ ಮೂಲಕ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

# Congratulations



Dr. Wooday P. Krishna, Honorary General Secretary, S.E.T. has been appointed Vice-President, Indian Montessori Centre, an organisation that offers Montessori training and assistance to pre-school directors all over India as well as in South-East Asian countries.

Sir has also been awarded with 'Gandhian S. Vishwanath Award' in Mandya by Mahatma Gandhi Memorial Trust. These developments are two more additions to Dr. W. P. Krishna's long list of laurels and credentials in the field of Education and Social Service. Congratulations Sir!



ಪ್ರಜಾವಾಣಿ ಸೋಮವಾರ • ಮಾರ್ಚ್ 13, 2017

ಮಂಡ್ಯದ ಗಾಂಧಿ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಾಂಧಿ ಚಿಂತಕ ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿವಾದಿ ಎಸ್.ವಿಶ್ವನಾಥ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಕಾರ್ಯದರ್ಶಿ ಜಿ.ಬಿ.ಶಿವರಾಜು, ಕರ್ನಾಟಕ ಗೆಜೆಟಿಯರ್ ನಿವೃತ್ತ ಸಂಪಾದಕ ಎಸ್.ರಾಜೇಂದ್ರಪ್ಪ, ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಜಿ. ಮಾದೇಗೌಡ, ಗಾಂಧಿ ಚಿಂತಕ ವೇಮುಗಲ್ ಸೋಮಶೇಖರ್, ಜಗದೀಶ್ ಕೊಪ್ಪ ಇತರರು ಇದ್ದಾರೆ

# Achievements

## Seshadripuram Institute of Commerce and Management

Seshadripuram, Bengaluru



RTS

ಕನ್ನಡಪ್ರಭ

ಭಾನುವಾರ 5.2.2017 ಬೆಂಗಳೂರು

**ಆರ್ಚರಿಯಲ್ಲಿ ಐಶ್ವರ್ಯಗೆ ಸ್ವರ್ಣ ಡಬಲ್**

ರಾಜ್ಯ ಒಲಿಂಪಿಕ್ಸ್ ಕೂಟದ ಎರಡನೇ ದಿನದಂದು ಎರಡು ಪದಕ ದೋಚಿದ ಬೆಂಗಳೂರು ಪ್ರತಿಭೆ | ಬೆಳ್ಳಿ ಪದಕ ಪಡೆದ ಅಂಕಿತಾ

Kum. Aishwarya R. of final year B.Com, Seshadripuram Institute of Commerce and Management has won 2 Gold Medals in Archery organised by Karnataka State Olympics Council held at Dharwad University Public School, Dharwad.

Our College NCC Cadet CSUO Poorva Reddy T. represented INDIA in the most prestigious National Cadet Corps Youth Exchange Program at Bhutan from 12 to 18 Dec. 2016. In total 10 NCC Cadets participated from all over India. She had also represented Karnataka & Goa Dte. in the Republic Day parade held at Delhi and also participated in the Rajpath.



## Seshadripuram Independent Pre-University College

Kengeri, Bengaluru



ಕ್ರೀಡೆ

ಪ್ರಜಾವಾಣಿ

ಹುಬ್ಬಳ್ಳಿಯ ಗಬ್ಬೂರು ಕ್ರಾಸ್–ವರೂರು ನಡುವೆ ನಡೆದ ಸ್ಪರ್ಧೆ; ವಿಜಯಪುರ ಜಿಲ್ಲೆ ಪಾರಮ್ಯ

**ರಸ್ತೆ ಸೈಕ್ಲಿಂಗ್: ಆರತಿ ಬಾಟಿಗೆ ಚಿನ್ನ**

ಹಾಕಿ: ಆತಿಥೇಯ ತಂಡಗಳಿಗೆ ಸೋಲು

ಬೋಲ್ಟ್ ಆಲ್ ಸ್ಟಾರ್ಸ್‌ಗೆ ಜಯ

ಟಿಟಿ: ಪ್ರಿಕ್ವಾರ್ಟರ್‌ಗೆ ಶರತ್

ಡಸರ್ಟ್ ಸ್ಟಾರ್ಮ್ ರ‍್ಯಾಲಿ: ನಟರಾಜ್‌ಗೆ ಪ್ರಶಸ್ತಿ

Kum. Lakshmi B., II PUC MEBA student of SIPUC Kengeri has won Gold Medal in Karnataka State Olympic Games 2017 held at Hubli - Dharwad.

## Seshadripuram College Postgraduate Department of Commerce and Management

Seshadripuram, Bengaluru



Mr. Deepak G.A. Student of Ist M.Com Batch 2016-18 has secured two gold medals (30 meters-gold medal and individual round-gold medal) and one silver medal (50 meters-silver medal) at Karnataka State Olympics 2017 in Dharwad. He has also represented Bangalore University in All India Inter-University Competition, which was organized by Krishna University, held at Machalipatnam, Andhra Pradesh and secured 104 all India ranking.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ ಉಪನಗರ, ಬೆಂಗಳೂರು




ಕೆಂಗೇರಿಯ ಶೇಷಾದ್ರಿಪುರಂ ಅಕಾಡೆಮಿ ಆಫ್ ಬ್ಯುಸಿನೆಸ್ ಸ್ಟಡೀಸ್ ಕಾಲೇಜಿನ ಎನ್.ಎಸ್.ಎಸ್. ಘಟಕದ ಶಿಬಿರಾರ್ಥಿಗಳಾದ ಸಾಗರಿಕ ಮತ್ತು ಅಮೂಲ್ಯರವರು ಕೇಂದ್ರ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಹಿಮಾಚಲ ಪ್ರದೇಶದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸಮಗ್ರತಾ ಶಿಬಿರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು.

## Seshadripuram Degree College

Mysuru

### Inter - Collegiate Inter Zonal TT Competition



Seshadripuram Degree College students Manjunath M.C., Abhijith N.J., Chandrashekar S. and Manoj M. have excelled in Inter-Collegiate Inter Zonal Table Tennis Competition by winning Bronze medal, organised by University of Mysore, Mysuru.

"A feminist is anyone who recognizes the equality and full humanity of women and men." - Gloria Steinem

# Seshadripuram First Grade College

Yelahanka, Bengaluru

## Silver Jubilee Inaugural Address
## By Prof. Muhammed Yunus, Nobel Peace Prize Awardee
## On 6 February 2017

*Prof. Yunus expressed his pleasure at being a part of the Silver Jubilee festivities and went on to share his insights with the gathering. The highlights of his speech are as follows:*

### *Humble Beginnings*

Prof. Yunus spoke of his humble beginnings, born in a remote village in Bangladesh, he was a brilliant students who received a Fullbright Scholarship to pursue his education in the U.S. following which he went on to teach Economics there.

### *Turning Point*

Prof. Yunus described his return to his war-torn homeland in 1974 where people were dying of hunger as the turning point in his life when he realised the impracticability of economic theories.

### *Going Against the Grain*

In an attempt to do something regarding the prevalent situation, Prof. Yunus started visiting surrounding villages and noticed the poor being exploited by loan-sharks. Going against the conventional wisdom of lending money to the rich and the men, Prof. Yunus lent money to women against much criticism. This led to the advent of micro financing and Grameen Bank which was established in 1983. It is indeed a matter of great pride that 97% of its borrowers are women who are now also involved in the policy-making.

### *Redefining Economics*

Speaking of the flaws in Economic theories Prof. Yunus pointed out that business could not be defined solely by profit and must ultimately be focused on larger social welfare. By lending atleast a part of the money to the needy rather than just the rich who will be able to return the loan, vast economic disparities may be bridged. Lending money was more profitable and empowering than giving away trillions of dollars in charity as is being done today.

### *Empowering the Poor*

To encourage the spirit of entrepreneurship, Grameen Bank created the Social Business Fund lending as little as $ 10-20 to more than 200, 000 beggars who were encouraged to start selling candy and other small items rather than beg. This has reduced the social evil by almost 25%.

### *Youth Entrepreneurs*

Educated youngsters who lamented a lack of job opportunities were encouraged to take inspiration from their illiterate mothers and set up their own businesses.

In the last two years, over 12, 000 graduates have turned entrepreneurs, each month sees thousands of business ideas seeking approval and funding and none are rejected. The bank offers them full support, even willing to fail with them.

This revolution has inspired similar movements all over the world.

### *A Social Revolution*

This economic revolution in turn led to other social revolutions with the bank providing loans for education, more and more youngsters went to colleges and universities. Similarly, patriarchy was shattered with women's empowerment.

Prof. Yunus urged all to take up entrepreneurship, deeming it as a natural choice. He expressed that human beings were meant to take their lives into their own hands and not work for others.

### *A Final Word of Inspiration*

Prof. Yunus encouraged today's young to take up social entrepreneurship and aspire to become job-givers rather than seekers as this would only lead to negative repercussions like the election of Donald Trump and Brexit.

He pointed to the students that they were indeed lucky to be born in Bengaluru-a technology hub and they must make use of the opportunities available to them.





ವಿಜಯ ಕರ್ನಾಟಕ

ಉದ್ಯೋಗವನ್ನು ಹುಡುಕಬೇಡಿ, ಸೃಷ್ಟಿಸಿ

ಉದಯವಾಣಿ ಬೆಂಗಳೂರು

ಟೈಮ್ಸ್ ಆಫ್ ಕರ್ನಾಟಕ

ಸಂಯುಕ್ತ ಕರ್ನಾಟಕ

ಪ್ರಜಾವಾಣಿ

ವಿಶ್ವವಾಣಿ

ವಿಜಯವಾಣಿ

ದೇಶ ನಿರ್ಮಾಣಕ್ಕೆ ನೀವೇ ಮುಂದಾಗಿ

ಸಂಜೆವಾಣಿ

THE NEW INDIAN EXPRESS

Do not be a job-seeker but be an entrepreneur, says Nobel laureate

THE TIMES OF INDIA

Become job creators, not seekers: Muhammad Yunus

दक्षिण भारत राष्ट्रमत

नोबाल पुरस्कार विजेता यूनुस का व्याख्यान कल

राजस्थान पत्रिका

नौकरी पाने के बजाय देने का लक्ष्य बनाएं: प्रो. यूनुस

ఆంధ్రజ్యోతి

సాక్షి 24/7

தினமணி

నవ భక్తి.. యువ శక్తి

ఈనాడు కర్ణాటక

Woman is a ray of God. She is not that earthly beloved: she is creative, not created. - Rumi

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2017

## ದಿಟ್ಟ ಮಹಿಳೆಯರು





**ಇಡೀ ವಿಶ್ವವು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಉಗಮಕ್ಕೆ ಕಾರಣೀಭೂತರಾದ ಇಬ್ಬರು ಮಹಿಳಾರತ್ನಗಳನ್ನು ನೆನೆಯುವುದು ಅತ್ಯಂತ ಹೆಮ್ಮೆಯ ವಿಚಾರವಾಗಿದೆ. ಶ್ರೀಮತಿ ಆನಂದಮ್ಮ ಮತ್ತು ಸೀತಮ್ಮ ಎಂಬುವವರೇ ಆ ಇಬ್ಬರು ಸಾಧಕಿಯರು. 1930ರಲ್ಲಿಯೇ 'ಸ್ತ್ರೀ ಸಮಾಜ' ಎಂಬ ಹೆಸರಿನಲ್ಲಿ ವಿದ್ಯಾಸಂಸ್ಥೆಯನ್ನು ಆರಂಭಿಸಿದ್ದು ಇವರ ಹೆಗ್ಗಳಿಕೆಯಾಗಿದೆ.**

**'ಸ್ತ್ರೀ ಸಮಾಜ'** ದ ರೂವಾರಿಗಳಾದ ಶ್ರೀಮತಿ ಆನಂದಮ್ಮ ಹಾಗೂ ಸೀತಮ್ಮನವರಿಗೆ ಸಾಹಿತ್ಯ, ಶಿಕ್ಷಣಕ್ಷೇತ್ರದಲ್ಲಿ ಅಭಿರುಚಿ ಇತ್ತು. ಆಗ ಹೆಣ್ಣು ಮಕ್ಕಳು ಸಂಗೀತ, ಕೈಕೆಲಸಗಳನ್ನು ದೂರ ಹೋಗಿ ಕಲಿಯಬೇಕಿತ್ತು. ಇದನ್ನು ಗಮನಿಸಿದ ಈ ಗಣ್ಯ ಮಹಿಳೆಯರು ಸ್ತ್ರೀ ಸಮಾಜವನ್ನು ಸ್ಥಾಪಿಸಿ, ಸ್ತ್ರೀಯರಿಗೆ ಉಪಯುಕ್ತವಾದ ಹೊಲಿಗೆ ಕೆಲಸ, ಕಸೂತಿ ಮತ್ತು ಚಮಕಿ ಕೆಲಸ, ಬೆತ್ತದ ಬುಟ್ಟಿ ಹೆಣೆಯುವುದು, ತಟ್ಟೆಗಳನ್ನು ಹೆಣೆಯುವ ಕೆಲಸ, ಚರಕಗಳಿಂದ ಹತ್ತಿಯ ದಾರ ತೆಗೆಯುವುದು ಜೊತೆಗೆ ಸಂಗೀತ ಮತ್ತು ಚಿತ್ರಕಲೆಗಳನ್ನು ಕಲಿಸಲಾಗುತ್ತಿತ್ತು. ಈಗಿನ ಶೇಷಾದ್ರಿಪುರಂ ಬಡಾವಣೆಯಾದದ್ದು ದಿವಾನ್ ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಎಂದು ಹೇಳಲಾಗಿದೆ.

ನಂತರ 1936ರಲ್ಲಿ ಈ ಸಂಸ್ಥೆಯು 'ಶೇಷಾದ್ರಿಪುರಂ ಶಿಕ್ಷಣ ಸಂಘ' ಎಂಬ ಹೆಸರಿನಲ್ಲಿ ವಿಸ್ತಾರಗೊಂಡಿತು. 1936ರಲ್ಲೇ ಶೇಷಾದ್ರಿಪುರಂ ಸ್ತ್ರೀ ಸಮಾಜದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಆರಂಭವಾದವು. 1945ರಲ್ಲಿ ಡಾ. ಟಿ.ಸಿ. ರಾಯನ್, ವಿದ್ಯಾಮಂತ್ರಿಗಳಿಂದ ಕಟ್ಟಡ ನಿರ್ಮಾಣದ ಅಸ್ಥಿಭಾರ ಕಾರ್ಯ ಆರಂಭವಾಯಿತು. 1979ರಲ್ಲಿ ಕಾಲೇಜಿನ ಮುಖ್ಯದ್ವಾರದಲ್ಲಿ ಸರಸ್ವತಿ ವಿಗ್ರಹದ ಸ್ಥಾಪನೆ, ನಂತರ 1980ರಲ್ಲಿ 'ಶೇಷಾದ್ರಿಪುರಂ ಶಿಕ್ಷಣ ಸಂಘವು 'ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್' ಆಗಿ ಪರಿವರ್ತನೆಯಾಗಿ ವಿಸ್ತಾರಗೊಂಡಿತು. ಇದು ಈಗ ವಿಶ್ವವಿಖ್ಯಾತ ವಿದ್ಯಾಸಂಸ್ಥೆಯಾಗಿದ್ದು 28 ವಿದ್ಯಾಸಂಸ್ಥೆಗಳನ್ನು ಒಳಗೊಂಡಿದೆ. ಪ್ರಸ್ತುತ ಸಂಸ್ಥೆಯಲ್ಲಿ 21000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದು ರಾಷ್ಟ್ರ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಇಂದು ಹೆಮ್ಮರವಾಗಿ ಬೆಳೆದಿರುವ ಸಂಸ್ಥೆಯನ್ನು ಅಧ್ಯಕ್ಷರಾದ ಶ್ರೀ ಎನ್. ಆರ್. ಪಂಡಿತಾರಾಧ್ಯ , ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣ ಹಾಗೂ ಇತರ ಗಣ್ಯರು ಮುನ್ನಡೆಸುತ್ತಿದ್ದಾರೆ.



## "ಸಾರ್ಥಕ ಜೀವನ ನಡೆಸಿದ ಹೆಮ್ಮೆ ನನ್ನದು"

**– ಸರೋಜ ಕೆ. ಎಂ. ನಂಜಪ್ಪ**

**ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಮಹಿಳೆಯಾದ ಸರೋಜ ಕೆ. ಎಂ. ನಂಜಪ್ಪ ಅವರು ನಡೆದು ಬಂದ ಸಾಧನೆಯ ಹಾದಿಯನ್ನು ವಾಣಿ ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ.**

ಇಳಿವಯಸ್ಸಿನಲ್ಲೂ ಕ್ರಿಯಾಶೀಲರಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಈ ಹೆಮ್ಮೆಯ ಮಾತೃ ಹೃದಯಿ ಸರೋಜಮ್ಮನವರನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವಾಣಿ ಆಡಳಿತ ಮಂಡಳಿಯು ಅಭಿನಂದಿಸಲು ಹರ್ಷಿಸುತ್ತದೆ.

ಸರೋಜ ಕೆ.ಎಂ. ನಂಜಪ್ಪ ಎಂಬ ಹೆಸರು ಬೆಂಗಳೂರಿನ ಸಮಾಜ ಸೇವಾವಲಯದಲ್ಲಿ ಚಿರಪರಿಚಿತ. ಮಮತಾಮಯಿಯಾದ ಇವರು ಹತ್ತು ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿ, ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತರಾದರು. ಆದರೆ ಅವರ ಕೆಲಸಕಾರ್ಯಗಳ ಹರವು ವಿಸ್ತಾರಗೊಂಡಿದ್ದೇ ನಿವೃತ್ತಿಯ ನಂತರ ಎಂಬುದೇ ವಿಶೇಷ.

ಸ್ವಾವಲಂಬಿಯಾಗಿ ಮನೆಯ ಜವಾಬ್ದಾರಿಗಳನ್ನು ಮುಗಿಸುವಷ್ಟರಲ್ಲಿ ನಿವೃತ್ತಿ ವಯಸ್ಸನ್ನು ತಲುಪಿದ್ದರು. ಮುಂದಿನ ದಿನಗಳಲ್ಲಿ ನಿವೃತ್ತಿ ಹಣದಲ್ಲಿ ಬದುಕಿನ ಮುಸ್ಸಂಜೆಯನ್ನು ಕಳೆಯುವ ಸಂಕಲ್ಪ ಅವರದಾಗಿತ್ತು. ಆದರೆ ಆ ಸಮಯದಲ್ಲಿ ಬಾಳ ಸಂಗಾತಿಯಾಗಿ ದೊರೆತ ಕೆ.ಎಂ. ನಂಜಪ್ಪನವರಿಂದ ಇವರ ಬದುಕು ಹೊಸ ತಿರುವು ಪಡೆದುಕೊಂಡಿತು. ಬೆಂಗಳೂರಿನ ರಾಜಕೀಯ ಮತ್ತು ಶೈಕ್ಷಣಿಕ ವಲಯದಲ್ಲಿ ಅತ್ಯುನ್ನತ ಸೇವೆಸಲ್ಲಿಸುತ್ತಿದ್ದ ನಂಜಪ್ಪನವರ ಸಂಪರ್ಕದಿಂದ ಸರೋಜಮ್ಮನವರ ಕಾರ್ಯಕ್ಷೇತ್ರವೂ ವಿಸ್ತಾರಗೊಂಡಿತು.

ದೊರೆತ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡ ಸರೋಜಮ್ಮನವರು ಕಾಲಕಳೆದಂತೆ ಸಾರ್ವಜನಿಕ ಸೇವಾಕ್ಷೇತ್ರಕ್ಕೆ ಕಾಲಿರಿಸಿದರು. ಸಮಾನ ಮನಸ್ಕ ಗೆಳತಿಯರೊಂದಿಗೆ ಕೂಡಿ ಶ್ರೀಮತಿ ರುದ್ರಾಣಿಯವರು ಹಿರಿಯ ನಾಗರಿಕರ ಸೇವೆಗೆಂದೇ ಆರಂಭಿಸಿದ್ದ 'ಸಂಧ್ಯಾದೀಪ'ವೆಂಬ ಸಂಸ್ಥೆಯನ್ನು ಮುನ್ನಡೆಸುವ ಆಕಾಂಕ್ಷೆಯೊಂದಿಗೆ ಸಂಸ್ಥೆಯ ಅಧ್ಯಕ್ಷತೆಯ ಜವಾಬ್ದಾರಿ ಹೊತ್ತರು. ಇತ್ತೀಚೆಗಷ್ಟೇ ಈ ಸಂಸ್ಥೆಯು 25ವರ್ಷಗಳನ್ನು ಪೂರೈಸಿದ್ದು ಬೆಳ್ಳಿಹಬ್ಬವನ್ನು ಆಚರಿಸಿದರು. ಇಂದು ಸಂಧ್ಯಾದೀಪವು ನೂರಾರು ಹಿರಿಯಜೀವಗಳಿಗೆ ಆಶ್ರಯ–ಆಸರೆ ನೀಡುತ್ತಿದೆ.

ಇವರ ಕ್ರಿಯಾಶೀಲತೆಗೆ ಮತ್ತು ಸೇವಾಪರತೆಗೆ ಸಂದ ಅವಕಾಶ ಹಾಗೂ ಗೌರವಗಳು ಹಲವಾರು. ಆಲ್ ಇಂಡಿಯಾ ವುಮೆನ್ ಕಾನ್ಫರೆನ್ಸ್ ಒಕ್ಕೂಟದ ಬೆಂಗಳೂರು ವಿಭಾಗ, ಲಯನ್ಸ್ ಕ್ಲಬ್‌ನ ಮಾಧವನಗರ ಶಾಖೆಯ ಅಧ್ಯಕ್ಷರಾಗಿ ಅನೇಕ ಸಮಾಜಮುಖಿ ಕಾರ್ಯಗಳಿಗೆ ಚಾಲನೆ ನೀಡಿದ್ದಾರೆ. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ಶಾಖೆಯ ಗೌರವ ಖಜಾಂಚಿಯ ಸ್ಥಾನವೂ ಒಲಿದದ್ದು ಇವರ ಕಾರ್ಯತತ್ಪರತೆಗೆ ಸಾಕ್ಷಿಯಾಗಿದೆ, ಶರಣ ಸಂಸ್ಕೃತಿಯ ವಕ್ತಾರೆಯಾಗಿ ಆ ಪರಂಪರೆಯನ್ನು ಮುಂದುವರೆಸುವ ನಿಟ್ಟಿನಲ್ಲಿ ಬಸವ ಸಮಿತಿಯ ಜಂಟಿ ಕಾರ್ಯದರ್ಶಿಯಾಗಿ ಪ್ರೇರಕಶಕ್ತಿಯಾಗಿದ್ದಾರೆ, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗೌರವ ಖಜಾಂಚಿಯಾಗಿಯೂ ಕಾರ್ಯನಿರ್ವಹಿಸಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ. ಪ್ರಸ್ತುತ ಇವರು ಶೇಷಾದ್ರಿಪುರಂ ಶಿಕ್ಷಣಸಂಸ್ಥೆಯಲ್ಲಿ ಗೌರವ ಸಹಾಯಕ ಕಾರ್ಯದರ್ಶಿಯಾಗಿ ಕಾರ್ಯೋನ್ಮುಖರಾಗಿದ್ದಾರೆ.

ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಶ್ರೀಮತಿ ಸರೋಜ ನಂಜಪ್ಪರವರನ್ನು ಮಾತನಾಡಿಸಿದಾಗ, ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಮುಂದೆ ಬರಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು. ಸಮಾಜದ ಏಳಿಗೆಗೆ ಶಿಕ್ಷಣ ಅತ್ಯವಶ್ಯಕ, ಅದರಲ್ಲೂ ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣವೊಂದೇ ಅಸ್ತ್ರವಾಗಿದೆ. ಹೀಗಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಈ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ವಿದ್ಯಾರ್ಥಿನಿಯರು ಪ್ರತಿವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ಹರ್ಷಿಸಿದರು. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಿದ್ದೇವೆ, ನೀಡುತ್ತಿದ್ದೇವೆ, ಮತ್ತು ಭವಿಷ್ಯದಲ್ಲಿಯೂ ಈ ಪ್ರೋತ್ಸಾಹ, ಸಹಕಾರವನ್ನು ನಿರಂತರವಾಗಿ ನೀಡುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದರು.



**ಶಾಂತಮ್ಮ**
ಹಿರಿಯ ಪತ್ರಕರ್ತರು

**ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೇ ನಮ್ಮನೆಲ್ಲ ಪೋರೆದವಳು, ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು?** - ಸಂಚಿಯ ಹೊನ್ನಮ್ಮ

# Happy Women's Day



Teaching profession has always been dominated by women thanks to their inherently superior communication skills and nurturing abilities. Also, given that the profession involves the dispersing of knowledge, it has always been perceived with respect and dignity and has enjoyed a kind of social acceptance due to which it has attracted women to it like no other. Teaching has also been perceived as a relatively 'less demanding' job that would not take away from women's domestic responsibilities and make for good work-life balance, a thing that was never expected of men.

However, things have changed now and will only continue to change. Women have made a foray into every profession, pursuing their interest, regardless of popular perceptions and convenience.

This being the case, more efforts have to be made by educational institutions to attract and retain good teachers regardless of gender. Also, the apparently less demanding profession has also elicited lesser wages than most others that require an educational qualification. This is another reason why more women have gravitated towards it as they are traditionally not expected to bring home the bacon and their incomes are secondary at best.

But with times and changes in gender equations, family structures and standards of living, this too is fast undergoing a transformation. More and more women are contributing more than before to the running of their households. The trend of single parents is also on the rise which means that the profession has to keep up in terms of providing adequate compensation and facilities to women particularly.

Above all, women are more assertive than ever, no longer satisfied just by the fact that they too earn money. External factors notwithstanding, a working woman today wants to make her worth just for herself, responsibilities and commitments apart.

Teaching too has become more demanding thanks to several changes in education system and thus this is only fair.

These steps to empower women employees are necessary to ensure that we do not lose out on talent based on gender.

At SET, we are proud to be an institution that was established by two pioneering women at a time when women did not receive an education, let alone start a school for others.

We are also proud that ours is an organisation that not only has a women's majority at the staff level but also at the managerial level. SET has a dozen women heading its various educational institutions, proving that the glass ceiling does not exist.

Girl students too dominate in terms of results and achievements, a testimony to the encouragement and support our institutions offer them.

With the help and understanding of these leaders, SET hopes to keep up with the constant process of progress and be an organisation with a heart.

It is tantamount that we provide our students strong, positive women role models and ensure that they develop a healthy gender perception.

Empowering the women who teach them is one of the greatest measures we can take in this direction. After all, the ones who teach them will leave a lasting mark on their young, impressionable minds.

**Dr. M. Prakash**
*Director of Studies, S.E.T.*
*Principal, S.E.D.C.*

## ಹೆಣ್ತನದ ಬಗೆಗೆ ಪ್ರೀತಿ, ಸ್ತ್ರೀವಾದವೆಂದರೆ ದ್ವೇಷವೇಕೆ?



ಸ್ತ್ರೀವಾದ, ಮಹಿಳಾ ಚಳವಳಿ, ಮಹಿಳಾ ಹಕ್ಕುಗಳು, ಲಿಂಗ ತಾರತಮ್ಯ ಈ ಪದಗಳನ್ನೆಲ್ಲಾ ಕ್ಲೀಷೆಯೆನಿಸುವಷ್ಟು ಬಳಸಿ, ಸವೆದ ನಾಣ್ಯಗಳಂತಾಗಿವೆಯಾ? ಸ್ತ್ರೀವಾದಿಗಳು ಎಂದರೆ ಬಾಬ್‌ಕಟ್, ಖಾದಿ ವಸ್ತ್ರ ಅಥವಾ ಕುರ್ತಾ ಧರಿಸಿ ಸದಾ ಗಂಡಸರ ಶೋಷಣೆ, ದಬ್ಬಾಳಿಕೆಯ ವ್ಯಾಖ್ಯಾನ-ವೈಭವೀಕರಣ ಮಾಡುವ; ವಿವಾಹ, ಕುಟುಂಬಗಳ ಚೌಕಟ್ಟಿನಿಂದಾಚೆಗೆಡೆಗಿನ ತುಡಿತವಿರುವ, ಸನಾತನ ಧರ್ಮ, ಆಚರಣೆಗಳನ್ನು ವಿರೋಧಿಸುವ ಹೆಂಗಸರ ಗುಂಪು ಎಂಬ ಸ್ಟಿರಿಯೋ ಟೈಪ್ ಎಲ್ಲರನ್ನೂ ಆವರಿಸಿದೆಯಾ? ಯಾಕೆ ಮತ್ತೆ ಮತ್ತೆ ಸ್ತ್ರೀವಾದವನ್ನೋ, ಸ್ತ್ರೀತ್ವವನ್ನೋ, ಸ್ತ್ರೀಸ್ವಾತಂತ್ರ್ಯ-ಸಮಾನತೆಯನ್ನೋ ಅದು ಅಪರಾಧವಲ್ಲ ಎಂದು ಸಮರ್ಥಿಸುವ, ಪರರಿಗೆ ವಿವರಿಸುವ ಕರ್ಮ ನಮಗೆ?

ಹೌದು, ವಿವರಿಸಿ ಹೇಳದಿದ್ದರೆ ಅಪಾರ್ಥಕ್ಕೆ ಎಡೆಯಾಗುವ, ಜೋರಾಗಿ ಕೂಗಿ ಕೂಗಿ ಹೇಳದಿದ್ದರೆ ಆ ಧ್ವನಿಯೇ ಅಡಗಿ ಹೋಗುವ, ಅರೆತೆರೆದಂತಿರುವ ಬಾಗಿಲುಗಳೆಲ್ಲಾ ಮುಚ್ಚಿಹೋಗುವ ಅಪಾಯ ಕಾಡುತ್ತಲೇ ಇರುತ್ತದೆ.

ಸ್ತ್ರೀವಾದವೆಂದರೆ –ಸ್ವೇಚ್ಛೆಯಲ್ಲ ಸ್ವಾತಂತ್ರ್ಯ, ಹೋರಾಟವಲ್ಲ – ಅನುಸಂಧಾನ, ಹಕ್ಕಿನ ಘೋಷಣೆಯಲ್ಲ – ಅಸ್ಮಿತೆಯ ಪ್ರತಿಷ್ಠಾಪನ, ಮಹಿಳಾಪರವಲ್ಲ – ಲಿಂಗಸಮಾನತೆಯ ಪರ, ಪುರುಷದ್ವೇಷಿಯಲ್ಲ – ಸಮಾನ ಗೌರವದ ಆಶಯವಷ್ಟೇ!

ಒಂದೆಡೆ ಜಾಗೃತಿ ಹೆಚ್ಚಾದಷ್ಟೂ ಮತ್ತೊಂದೆಡೆ ಶೋಷಣೆ, ಹಿಂಸೆಯೂ ಹೆಚ್ಚಾಗುತ್ತಿದೆ, ಮಾನವ ನಾಗರೀಕನಾದಷ್ಟೂ ವಿನಾಶಕಾರಿಯಾದಂತೆ. ನೂತನ ಆವಿಷ್ಕಾರಗಳು ಸೃಷ್ಟಿಯ ವೈಚಿತ್ರವನ್ನು ಎಳೆಎಳೆಯಾಗಿ ಬಿಡಿಸಿಟ್ಟಂತೆ, ಸ್ತ್ರೀವಾದಿಗಳೂ ಪುರುಷ ದಬ್ಬಾಳಿಕೆಯ ಪದರ ಪದರಗಳನ್ನೂ ಬಿಚ್ಚಿಡುತ್ತಿದ್ದಾರೆ. ಸೊಫೆಸ್ಟಿಕೇಟೆಡ್ ಬದುಕಿನ ಸೊಫೆಸ್ಟಿಕೇಟೆಡ್ ಶೋಷಣೆಯ ಮಾದರಿಗಳು ಬೆಚ್ಚಿ ಬೀಳಿಸುತ್ತಿರುವುದಂತೂ ನಿಜ. ಇನ್ನು ಸ್ತ್ರೀವಾದದ ಸೈದ್ಧಾಂತಿಕ ಪ್ರತಿಪಾದನೆಗಳಿಗೆ ಸಿನಿಕತೆಯ ಪ್ರತಿಕ್ರಿಯೆಗಳಿಗಂತೂ ಕೊನೆಯಿಲ್ಲ.

ಸ್ತ್ರೀವಾದಿಗಳ ಹೋರಾಟವು ಕೇವಲ ಲಿಂಗ ಸಮಾನತೆಯ ಚೌಕಟ್ಟಿಗಷ್ಟೇ ಒಳಪಟ್ಟಿಲ್ಲ. ಲೈಂಗಿಕ ಸ್ವಾತಂತ್ರ್ಯ, ಗರ್ಭಪಾತದ ಹಕ್ಕು, ಜನನ ನಿಯಂತ್ರಣದ ಆಯ್ಕೆಯ ಹಕ್ಕುಗಳ ಸುತ್ತಲೂ ವಿಸ್ತರಿಸಿಕೊಂಡಿದೆ. ಮಹಿಳೆಗ್ಯಾಕೆ ಇಷ್ಟೆಲ್ಲಾ ಸವಲತ್ತುಗಳು ಎನ್ನುವವರು ಆಕೆಯು ನಿರ್ವಹಿಸುತ್ತಿರುವ ಪಾತ್ರಗಳತ್ತಲೂ ಗಮನಹರಿಸಬೇಕು.

ಒಂದೆಡೆ ಒನ್ ವುಮನ್ ಆರ್ಮಿಯಂತೆ ಮನೆ-ಕಛೇರಿ ಎರಡನ್ನೂ ನಿಭಾಯಿಸಬೇಕಾದ ಜವಾಬ್ದಾರಿ, ಇನ್ನೊಂದೆಡೆ ಇವೆಲ್ಲವನ್ನೂ ನಿರ್ವಹಿಸುತ್ತಲೂ ಎಲ್ಲ ಸಂದರ್ಭದಲ್ಲಿಯೂ ಗಂಡನಿಗೆ, ಪುರುಷ ಸಹೋದ್ಯೋಗಿ, ಮೇಲಧಿಕಾರಿಗಳಿಗೆ ವಿನೀತ, ವಿನಮ್ರಳಾಗಿ ಅವರುಗಳ ಸೂಪರ್-ಇಗೋವನ್ನು ಕಾಪಿಟ್ಟುಕೊಳ್ಳಬೇಕಾದ ಎಚ್ಚರಿಕೆ ಜಾಗೃತವಾಗಿರಬೇಕು. ಇನ್ನು ಎಮೋಶನಲ್ ಅತ್ಯಾಚಾರ್‌ಗಳಿಗೆ ಕೊನೆಯೆಲ್ಲಿ. ಅವುಗಳಂತೂ ವ್ಯಾಖ್ಯೆ, ಊಹೆ, ವಿವರಣೆಗಳಿಗೆ ನಿಲುಕದ್ದು.

ಸಮಾನ ವೇತನ, ಮತದಾನದ ಹಕ್ಕಿನಿಂದ ಆರಂಭವಾಗಿ ಹೆಣ್ಣು ಗಂಡಿಗಿಂತ ಯಾವ ನೆಲೆಯಲ್ಲೂ ಕಡಿಮೆಯಿಲ್ಲ ಎಂಬುದೆಲ್ಲಾ ಮುಗಿದು ಆಕೆ ಗಂಡಿಗಿಂತ ವಿಶಿಷ್ಟಳು, ಅನನ್ಯಳು ಎಂಬ ವಿಚಾರಗಳು ಇಂದು ಮುನ್ನಲೆಗೆ ಬಂದಿವೆ. ಒಂದು ಪೊಸಿಟಿವ್ ನೋಟ್‌ನಲ್ಲಿಯೇ ಈ ಚಳವಳಿಯನ್ನು ಮುಂದುವರೆಸಲು ಲಿಂಗ ತಾರತಮ್ಯದ ಬದಲಾಗಿ ಲಿಂಗ ಸಮಾನತೆಯ ಬಗ್ಗೆ ಹೆಚ್ಚು ಮಾತನಾಡಬೇಕಿದೆ.

ಸಾಕ್ರೆಟೀಸ್ ಹೇಳುವಂತೆ – " ಖುಜಖುಡಿಜಾ ಡಿ ಛುಚಿಟಿಡಿುಣಂಜಿಥಿಣಾಚಿಟಟ ಡಿ ಥಿತಾಊ ಜುಜುಊಥಿ, ಟಿತಾ ಡು ಜುಛುಣುಟಂಖುಜಟುಜ, ಛಾಾ ಡು ಛಾಟುಜುುಟಂಟಿಜತಿ ."

ಹೆಣ್ತನವೆನ್ನುವುದು ಒಂದು ಮನಸ್ಥಿತಿ ಅದು ಪುರುಷರ ವ್ಯಕ್ತಿತ್ವದ ಒಂದು ಭಾಗವಾಗಿಯೂ ರೂಪುಗೊಳ್ಳಬಹುದು ಎಂಬುದನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ಬದಲಾಗಬೇಕಿರುವುದು ಕೇವಲ ನಂಬಿಕೆ, ಚಿಂತನೆಗಳಷ್ಟೇ ಅಲ್ಲ ನಡವಳಿಕೆಯೂ ಕೂಡ. ಈ ಹಾದಿಯಲ್ಲಿ ಲೌಕಿಕ ಅನುಕೂಲಗಳು, ಕಾನೂನಿನ ನೆರವು, ತಾತ್ವಿಕ ಸೈದ್ಧಾಂತಿಕ ಹೋರಾಟಗಳಷ್ಟೇ ಮಹತ್ವವಾದದ್ದು ಗಂಡು ಮತ್ತು ಹೆಣ್ಣು ಪರಸ್ಪರ ಸಹಯಾತ್ರಿಕರಂತೆ ಸಮಾನತೆಯ ಬದುಕ ಬಂಡಿಯನ್ನು ಸಾಗಿಸುವುದು.

**ಡಾ. ಕಾವ್ಯಶ್ರೀ ಎಚ್.**
ಕನ್ನಡ ಉಪನ್ಯಾಸಕಿ
ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು (ಮುಖ್ಯ)

**ಮನೆಮನೆಯಲ್ಲಿ ದೀಪ ಮೂಡಿಸಿ, ಹೊತ್ತು ಹೊತ್ತಿಗೆ ಅನ್ನ ಉಣಿಸಿ, ತಂದೆ ಮಗುವ ತಬ್ಬಿದಾಕೆ, ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೆ ಸಾಕೆ** – ಡಾ. ಜಿ.ಎಸ್. ಶಿವರುದ್ರಪ್ಪ






## GENDER DISCRIMINATION

*Discrimination between male and female teaching/ non-teaching staff.*

It's a social and economic loss for people, businesses and institutions generally if women are not given equal opportunity. In our institution, I don't see any significant discrimination among male and female staff.

I believe there is an invisible barrier to women's advancement. Stereotyping is one of the key contributors to the gender gap in women leadership. In general, it's quite a hard-hitting task to break the glass ceiling.

*Do women have to prove themselves harder to get to the top?*

You've probably heard the following statistic: Men apply for a job when they meet only 60% of the qualifications, but women apply only if they meet 100% of them. The finding comes from a Hewlett Packard internal report.

Yes, I think before a position is offered to a woman there are certain facets looked into viz., marital status, age, family responsibilities, inexperience, role biases, stereotyping, myth that women aren't tough enough for business and so on. Contrastingly, a powerful woman generally appears as threatening or aspirational, but not considered as simply normal.

*What's the general attitude towards women heads from staff/ management?*

Positive dimension: The key behaviour or attitude towards women heads is that they are good at Mentoring, Monitoring, Supporting, Role-modelling, Networking, problem-solving, Committed, strong emotional intelligence, agile and so on.

Disturbing Dimension: The perspective towards women is that "taking-care" and "taking-charge" skills, assertiveness and competition are stereotypically masculine behaviours and traits with effective leadership. Men are cast as "natural" leaders, while women constantly must prove that they can lead.

Women receive polarized evaluations - Women's leadership behaviours are most of the time evaluated against a masculine leadership norm. Women are viewed to be too soft or too tough i.e., all-or-nothing thinking considering women to be incompetent or unfeminine. Constant pressure to never make a mistake, and to continually prove value to the institution.

When male employees offer ideas, they receive higher performance evaluations; when women offer the same ideas, perceptions of their performance remain unchanged. Then there arecertain structural problems involved with single women, women having family (no children) and women having children.

The other disruptive conceptis about Motherhood Penalty and Fatherhood Bonus where pregnant women are perceived as "less authoritative and more irrational, regardless of their actual performance and irrespective of fatherhood men are considered to be committed and rational. Mothers are often seen as less committed to work.

Assumptions about demographics and life choices-women leave to start families; women don't aspire to upper management; regional differences skew the results-have become excuses for gender inequity in the management ranks, even putting the onus on female employees for the discrepancies.

Finally, women leaders face high standards and are looked with High Competence Threshold and moreover, even if the leader is Competent yet Disliked.

*If discrimination exists, how do you counter it?*

Institutions need to make sure they're filling positions based on qualifications and competence, not presumptions. There has to be a mechanism for coaching, developing and mentoring women employees at that first landing spot.

Institutions should respect parenthood as a natural and divine process and assist them in accelerating their career progression.

Implement innovative work practices that can address specific problem areas.

Provide adequate tools and resources to increase awareness of women leadership skills and career path. Women have to clearly communicate concerns and should not discount their own feelings or perceptions.

Become visible - seek high level assignments, be consistent, find a mentor, be assertive, adapt to the context, communicate clearly, re-frame the issue to your advantage and ask questions.

*Is there any kind of edge women staff/ heads have over their male counterparts?*

Women leaders excel at "nurturing" competencies such as developing others and building relationships, and demonstrate integrity and engage in self-development as well. Their perspectives are different, women look at problems differently. Women have certain treasured characteristics such as maturity, taking initiative, driving for results with a touch of compassion.

## WORK-LIFE BALANCE

*How important is the support of the family when it comes to a demanding career?*

Life sometime takes over, child's ill-health, demise of a loved one, hospitalization of parents, parents -teachers meeting at child's school, presentation to management, solving a sexual harassment case in the organization, low market share in such situations it's a challenge to sustain momentum and stay connected to family and work. In such demanding and stressful situations, it's the family support which counts. A word of reassurance, affection and support builds better Adversity Quotient and resilience creating miracles (Get the Life you want).

*Can women have it all? A fulfilling job and a personal life?*

Balancing work and family demands is a critical challenge facing most women employees. It is possible to have a fulfilling job and personal life (Work – Life Integration), if you:

- ✓ Do not have Spillover Approach
- ✓ Focus on mental well-being
- ✓ Definesuccess for yourself
- ✓ Managetechnology
- ✓ Build support networks at work and at home
- ✓ Collaborate with your partner
- ✓ Recognize stress
- ✓ Develop empathy
- ✓ Respond instead of reacting to situations
- ✓ Change the conversation within self (modify one's inner conversations)
- ✓ Adjust expectations
- ✓ Live in the present moment

Forgive (Forgiveness is the economy of the heart... forgiveness saves the expense of anger, the cost of hatred, the waste of spirits).

*As a female head of the institution, what are the improvements you feel should be made vis-à-vis women staff as well as students.*

The following action plans can be considered:

- ✓ Institutional initiatives and individual coping strategies to facilitate work—life integration.
- ✓ Women's Mentoring Program
- ✓ Employee Resource groups
- ✓ Developing Women Series
- ✓ Success Forum
- ✓ Measure and publicly report on progress to achieve gender equality

Finally, women need a voice and we need not only to listen, but to amplify their voices.

**Dr. Bhargavi V.R.**
*Professor and Director*
*Seshadripuram College*

"We need to reshape our own perception of how we view ourselves. We have to step up as women and take the lead." - Beyonce

# Events

## Seshadripuram Independent Pre-University College and Seshadripuram Academy of Business Studies

Kengeri, Bengaluru

### Republic Day Celebrations



On 26 Jan. 2017, Seshadripuram Independent P.U. College and Seshadripuram Academy of Business Studies, Kengeri jointly celebrated 68th Republic Day. The chief guests for the occasion were Smt. Lakshmi Satyavrata, Veteran Freedom Fighter and Sri H. M. Manjunath, Advocate, High Court of Karnataka.

## Seshadripuram PU College and Seshadripuram Degree College

Mysuru

### Republic Day Celebrations



On 26 Jan. 2017, Seshadripuram Independent P.U. College and Seshadripuram College, Mysuru jointly celebrated 68th Republic Day. Seshadripuram College also held its first Alumni meet 'Lahari'.

### Annual Sports Day



On 6 Jan. 2017, Seshadripuram College and Seshadripuram P.U. College jointly held their Annual Sports Day. The chief guest on this occasion was Sri Jayaprakash, Deputy Director, Pre-University Board, Mysuru.

## Seshadripuram Law College

Seshadripuram, Bengaluru



On 15 Feb. 2017, Vivekananda Study Centre, Seshadripuram Law College, Seshadripuram organised a lecture by Swamy Tyagishwarananda, Sri Ramakrishna Mutt, Halasuru, Bengaluru.




On 21 Feb. 2017, Centre for Gandhian Studies, Seshadripuram Law College in association with Gandhi Peace Foundation organised a Lecture on, Gandhi and Social Justice. The guest speaker on this occasion was Sri. Mangaluru Vijay, Social Activist and Writer, Gandhi Bhavan, Bengaluru.



On 17 Feb. 2017, the Law Forum of Seshadripuram Law College, Seshadripuram had organised a lecture on Crime Scene Examination and Investigation, the resource person was Dr. Dinesh Rao, Professor, and HOD, Department of Forensic Medicine, Oxford Medical College, Bengaluru.

## Seshadripuram Academy of Business Studies

Kengeri, Bengaluru

### State-Level Cultural & Management Fest




On 27 and 28 Jan. 2017, a Two-day State Level Cultural and Management Fest, 'Fiesta Grande' was held at Seshadripuram Academy of Business Studies, Kengeri. The chief guests for the inaugural function were Mr. Suresh Babu and Mr. Yatin Sharma, industrialists.

"I think the best role models for women are people who are fruitfully and confidently themselves, who bring light into the world." - Meryl Streep

## Seshadripuram First Grade College
Yelahanka, Bengaluru

### Inter-Collegiate Fencing Competition



On 4 Jan. 2017 Seshadripuram First Grade College, Yelahanka hosted an One-day Bangalore University Inter-Collegiate Fencing Competition. Mr. Irom Deban Singh, Senior Fencing Coach, Sports Authority of Karnataka was the guest of Honour.

## Seshadripuram High School
Seshadripuram, Bengaluru

### Play, 'Save the Earth'

On 10 Feb. 2017, Seshadripuram High School, Kumara Park Staged a play, 'Save the Earth' in Seshadripuram College campus and at Orion Mall.




## Seshadripuram Institute of Commerce and Management
Seshadripuram, Bengaluru

### Founders' Cup - 6th Annual S.E.T. Inter-Institution Badminton Competition 2016-17




On 28 Jan. 2017, Seshadripuram Institute of Commerce and Management had organised the Founders' Cup - 6th Annual S.E.T. Inter-Institution Badminton Competition 2016-17. The chief guest on this occasion was Prof. M. Vikram, P. E. Director and Vice-Principal Kanakapura Rural College, Kanakapura.

### Benchmarking In Educational Institutions

One Day Workshop was organised at SICM - IQAC Team on the topic "Benchmarking In Educational Institutions" conducted on 3rd Feb. 2017 at College Auditorium. The session folded up with 3 technical sessions, the speakers were Dr. L. N. Seshagiri , Dr. B. L. Bhagyalakshmi and Prof. K. Eresi. The workshop attracted participants from various colleges from Bangalore University.



## Seshadripuram Law College
Seshadripuram, Bengaluru

### One-Day State Level Seminar



On 9 Mar. 2017, a One-day State Level Seminar on 'Parliamentary Procedures' was organised by Karnataka Institute for Law and Parliamentary Affairs (K.I.L.P.A.R.) in association with Seshadripuram Law College, Bengaluru at Gandhi Bhavan auditorium. The seminar was inaugurated by Sri Srinivas N., Principal Secretary, Law Department, Government of Karnataka and was also graced by Sri S.B. Gunjigavi, Director, K.I.L.P.A.R., Bengaluru and Dr. Revaiah, Research Head, KILPAR.

## Seshadripuram College Postgraduate Department of Commerce and Management
Seshadripuram, Bengaluru

### Career Day

On 28 Feb. 2017, Career Day 2017 was organized by the postgraduate Department of Commerce and Management, Seshadripursm College. Panel discussion by industry professionals from different domains like H.R., Marketing, Finance and Banking addressed the students about the career opportunities and the challenges to be faced in the world.



### One-Day Conference on E-Learning



On 23 Feb. 2017, a One-day Student Conference on 'E-Learning and Its Implications' was organised by the Postgraduate Departmentof Commerce and Management, Seshadripuram College. Students presented papers on the same theme.

## Seshadripuram Pre-University College
Seshadripuram, Bengaluru

### Prize Distribution

On 28 Dec. 2016, Seshadripuram PU (Main) College organised Prize Distribution program to felicitate the students who won prizes in various cultural and sports activities. Sri Mruthyunjaya Doddawada, a well known Kannada singer and music director and Sri M.K. Sathyakumar, Kho-Kho Coach S.A.I. were the chief guests on this occasion.



ಹೆಣ್ಣಿಂದಲೇ ಇಹವು, ಹೆಣ್ಣಿಂದಲೇ ಪರವು, ಹೆಣ್ಣಿಂದಲೇ ಸಕಲ ಸಂಪಸವು, ಹೆಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ - ಸರ್ವಜ್ಞ

# Annual Day

## Seshadripuram English High School
Seshadripuram, Bengaluru



On 22 Dec. 2016, Seshadripuram English High School, Kumara Park West celebrated its Annual School Day. The chief guest on this occasion was Dr. B. A. Anuradha, Principal, Al-Ameen Institute of Management Studies, Bengaluru.

## Seshadripuram High School
Yelahanka, Bengaluru




On 21 Dec. 2016, Seshadripuram High School, Yelahanka celebrated its Annual School Day, 'Metafiction-Barahakondu Namana'. The chief guest on the occasion was Sri Venkata Subba Rao, Electrical engineer and a Vedic Mathematician.

## Seshadripuram Independent Pre-University College
Kengeri, Bengaluru



On 13 Jan. 2017, Seshadripuram Independent Pre-University College, Kengeri Satellite Town, celebrated its Annual Day Ninada. The chief guest on this occasion was Sri K. Kalyan, noted Lyricist, Music Director and Film Director.

## Seshadripuram Pre-University College
Seshadripuram, Bengaluru



Seshadripuram P.U. (Main) College's 46th Annual Day celebration was held on 10 Jan. 2017, Dr. K. Gururaj Acharya, a prominent Chartered Accountant was the chief guest on this occasion.

## Seshadripuram English High School
Seshadripuram, Bengaluru




ಮಾಗಡಿಯ ಶೇಷಾದ್ರಿಪುರಂ ಕಾಮರ್ಸ್ ಕಾಲೇಜು 04-03-2017 ರಂದು "ವಾರ್ಷಿಕೋತ್ಸವ" ಕಾರ್ಯಕ್ರಮವನ್ನು ಕಾಲೇಜಿನ ಸಭಾಂಗಣದಲ್ಲಿ ಆದರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ|| ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಇವರು ಆಗಮಿಸಿದ್ದರು. ಕಾರ್ಯಕ್ರಮವನ್ನು ಉದ್ಧೇಶಿಸಿ ಮಾತನಾಡಿದ ಇವರು "ವಿದ್ವತ್ ಒಂದು ಕಣ್ಣು, ವಿವೇಕ ಮತ್ತೊಂದು ಕಣ್ಣು" ಎಂದು ಹೇಳುತ್ತಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಪ್ರಾಂಶುಪಾಲ ಡಾ|| ಮಂಜುನಾಥ್ ಆರ್. ಉಪಸ್ಥಿತರಿದ್ದರು.

# Blood Donation Camp

## Seshadripuram Law College
Seshadripuram, Bengaluru




On 13 Feb. 2017, Seshadripuram Law College in association with Karnataka Voluntary Blood Donors Association organised a Blood Donation Camp as Memorial to Late K. M. Nanjaapa, Ex-President, Seshadripuram Educational Trust. The function was graced by Sri N. L. Narendra Babu, Former Member, Legislative Assembly.

## Seshadripuram Pre-University College and Seshadripuram Degree College
Mysure



On 30 Jan 2017, Seshadripuram P.U. College and Seshadripuram College, Mysuru in association with Rotary Inner Wheel Club, Mysuru and Chandrakala Hospital organised Blood Donation Camp. The chief guest on the occasion was Dr. Prajwal M., Medical Officer, Blood Bank, Chandrakala Hospital.

## Seshadripuram First Grade College
Yelahanka, Bengaluru



On 24 Jan. 2017 Seshadripuram First grade college, Yelahanka in association with Youth Red Cross and National Service Scheme organized a Blood donation camp. The function was graced by Sri S.R. Vishwanath , M.L.A. of Yelahanka constituency. 700 students took an active participation through donating their blood.

"I think the key is for women not to set any limits." - Martina Navratilova, Tennis player

# Reports

## Seshadripuram Group of Institutions

## Centre for Global Excellence

### Workshop on Supply Chain Management



On 5th and 6th Feb. 2017, for 05 Hours - 10 hours a day, Centre for Global Excellence had organised a workshop on "Supply Chain Management". The pedagogy used was Simulation where prior arrangements required was shared by Geoff through email.

The workshop was successfully conducted with around 60 participants (students and faculty from all our sister institutions). On 5th February, 2017 the workshop was concluded by distributing the certificates to the participants.

### Interactive Session on Conflict in Workplace and Education and Research in Business Discipline at American Universities



The way business handles conflict between employees, management or business partners can have a big impact on profits, productivity and morale. Conflict is a major cause of staff turnover and costs your business money. Good management practices can help you avoid unnecessary conflict and deal with inevitable conflict in an effective and professional way. It was an appropriate topic chosen for an interactive session with students. Dr. Parker shared her experiences in managing workplace conflict through a beautiful presentation.

Further, the faculty had an opportunity to interact with Dr. Parker about the Education and Research opportunities in business discipline at the United States. The faculty found the interaction to be very meaningful. Questions regarding doctoral programs, teaching pedagogy, evaluation, appraisals and other higher education related aspects were raised.

## Seshadripuram High School

Yelahanka, Bengaluru



On 16 March 2017, Seshadripuram High School, Yelahanka conducted Saraswathi Puja and Graduation Day ceremony for 10th std outgoing batch for the year 2016-17 at the school Rangamandira. The chief guest of the occasion Sri. Ramesh Umrani, a soft skill trainer gave valuable tips and his best wishes to the students.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ ಉಪನಗರ, ಬೆಂಗಳೂರು

### ಕಾಲೇಜು ವಾರ್ಷಿಕೋತ್ಸವ ಬಹುಮಾನ ವಿತರಣಾ ಕಾರ್ಯಕ್ರಮ



ಕೆಂಗೇರಿಯ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ 3ನೇ ಮಾರ್ಚ್ 2017ರಂದು ಕಾಲೇಜಿನ ಸಭಾಂಗಣದಲ್ಲಿ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಭಾರತೀಯ ಕ್ರೀಡಾ ಪ್ರಾಧಿಕಾರದ ಭಾರ ಎತ್ತುವ ಸ್ಫರ್ಧೆಯ ಪ್ರಧಾನ ತರಬೇತುದಾರ ಶ್ಯಾಮಲ ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳು ಹೆಚ್ಚೆಚ್ಚು ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವುದಲ್ಲದೆ ಶಾರೀರಿಕ ಸದೃಢತೆಯನ್ನು ಪಡೆದುಕೊಳ್ಳಬೇಕೆಂದು ತಿಳಿಹೇಳಿದರು. ಮತ್ತೊಬ್ಬ ಅತಿಥಿ ಏಕಲವ್ಯ ಪ್ರಶಸ್ತಿ ಪುರಸ್ಕೃತ ಮೇಘನಾ. ಬಿ. ಜೆ. ಬಹುಮಾನ ಪಡೆದ ವಿಧ್ಯಾರ್ಥಿಗಳನ್ನು ಸ್ಫೂರ್ತಿದಾಯಕ ಮಾತುಗಳಿಂದ ಶ್ಲಾಘಿಸಿದರು. ಕೆಂಗೇರಿ ಗೇಟ್ ಪೋಲಿಸ್ ಠಾಣೆಯ ಸಹಾಯಕ ಪೋಲಿಸ್ ಆಯುಕ್ತ ವಿ. ಜೆ.ಸಜೀತ್ ವಿದ್ಯಾರ್ಥಿಗಳು ಕ್ರೀಡೆಯ ಜೊತೆಗೆ ನಾಗರೀಕ ಸೇವೆಯನ್ನು ಮಾಡುವ ಸಲುವಾಗಿ ನಾಗರೀಕ ಸೇವಾ ಪರೀಕ್ಷೆಗಳಾದ ಐ.ಎ.ಎಸ್. ಮತ್ತು ಕೆಎಎಸ್ /ಐಪಿಎಸ್ ನಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಜಯರಾಮ್ ಅಧ್ಯಕ್ಷತೆಯನ್ನು ವಹಿಸಿದ್ದರು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ, ಬೆಂಗಳೂರು

### ಅಚಿಬೇಡ್ಕರ್ ಅಧ್ಯಯನ ಕೇಂದ್ರ



ಕಾಲೇಜಿನ 'ಅಂಬೇಡ್ಕರ್ ಅಧ್ಯಯನ ಕೇಂದ್ರ'ದ ವತಿಯಿಂದ ದಿನಾಂಕ 15 ಫಿಬ್ರವರಿ 2017ರಂದು ನಿವೃತ್ತ ಕನ್ನಡ ಪ್ರಾಧ್ಯಾಪಕರು ಲೇಖಕರೂ ಆದ ಪ್ರೊ. ಎಂ.ಜಿ. ಚಂದ್ರಶೇಖರಯ್ಯನವರಿಂದ 'ಅಂಬೇಡ್ಕರ್ ಮತ್ತು ಸಾಮಾಜಿಕ ಪರಿವರ್ತನೆ' ವಿಷಯುವನ್ನು ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಎಸ್.ಎನ್.ವೆಂಕಟೇಶ್ ವಹಿಸಿದ್ದರು. 'ಅಂಬೇಡ್ಕರ್ ಅಧ್ಯಯನ ಕೇಂದ್ರ'ದ ಸಂಚಾಲಕರಾದ ಡಾ.ಗೀತಾ ಡಿ.ಸಿ. ಅತಿಥಿಗಳನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

'ಅಂಬೇಡ್ಕರ್ ವಿಚಾರ ಧಾರೆ' ಎಂಬ ವಿಷಯವನ್ನು ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಇದೇ ದಿನದಂದು ಬಹುಮಾನವನ್ನು ವಿತರಿಸಲಾಯಿತು. ವಿಜೇತ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಅಭಿನವ ಪ್ರಕಾಶನದವರು ಬಹುಮಾನಗಳನ್ನು ಪ್ರಾಯೋಜಿಸಿ, ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಿದ್ದರು.

### ನಮ್ಮ ಸಂಸ್ಕೃತಿ



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ವೇದಿಕೆಯಿಂದ 23 ಫೆಬ್ರವರಿ 2017ರಂದು, 'ನಮ್ಮ ಸಂಸ್ಕೃತಿ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ ಪಾರಂಪರಿಕ ಉಡುಗೆ-ತೊಡುಗೆಯಲ್ಲಿ ಭಾಗವಹಿಸಿ, ಕಾಲೇಜಿನಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದ್ದರು.

ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ

# ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ವಾರ್ಷಿಕ ಶಿಬಿರ

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

**ಕೆಂಗೇರಿ ಉಪನಗರ, ಬೆಂಗಳೂರು**

### ಯುವಜನತೆಗಾಗಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವ”

ಕೆಂಗೇರಿಯ ಶೇಷಾದ್ರಿಪುರಂ ಅಕಾಡೆಮಿ ಆಪ್ ಬಿಸಿನೆಸ್ ಸ್ಟಡೀಸ್ ಕಾಲೇಜಿನ ಎನ್.ಎಸ್.ಎಸ್. ಘಟಕವು ರಾಮನಗರಜಿಲ್ಲೆ, ಕೂಟಗಲ್ ಹೋಬಳಿ, ದೊಡ್ಡಗಂಗವಾಡಿ ಗ್ರಾಮದಲ್ಲಿ “ಯುವಜನತೆಗಾಗಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವ” ಶೀರ್ಷಿಕೆಯಡಿಯಲ್ಲಿ 2016-17ರ ವಿಶೇಷ ಶಿಬಿರವನ್ನು ದಿನಾಂಕ 15 ಜನವರಿ 2017ರಂದು ಆಯೋಜಿಸಿತ್ತು. ಮಾಗಡಿ ವಿಧಾನಸಭಾಕ್ಷೇತ್ರದ ಶಾಸಕರಾದ ಹೆಚ್.ಸಿ. ಬಾಲಕೃಷ್ಣ, ಮಾಜಿ ಶಾಸಕರಾದ ಕೆ. ರಾಜು, ತಾ॥ ಪಂ॥ ಅಧ್ಯಕ್ಷ ಡಿ.ಎಂ. ಮಹದೇವಯ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗಂಗಮ್ಮ, ಉಪಾಧ್ಯಕ್ಷ ಶಿವಕುಮಾರಸ್ವಾಮಿ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಪ್ರೊ॥ ಜಯರಾಮ್, ಎನ್.ಎಸ್.ಎಸ್. ಘಟಕದ ಶಿಬಿರಾಧಿಕಾರಿಗಳಾದ ಹೆಚ್.ಬಿ. ಮಹಂತೇಶ ಅವರ ಉಪಸ್ಥಿತಿಯಲ್ಲಿ ಶಿಬಿರವನ್ನು ಉದ್ಘಾಟಿಸಲಾಯಿತು.

### ಪಶು ಆರೋಗ್ಯತಪಾಸಣಾ ಶಿಬಿರ

ಇದೇ ವಾರ್ಷಿಕ ವಿಶೇಷ ಸೇವಾ ಶಿಬಿರದಲ್ಲಿ ಬೆಂ.ಹಾ.ಉ. ಒಕ್ಕೂಟದ ಸಹಯೋಗದಲ್ಲಿ ಪಶು ಆರೋಗ್ಯ ತಪಾಸಣ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಗ್ರಾಮದ ಹಾಗೂ ಅಕ್ಕಪಕ್ಕದ ಗ್ರಾಮದ ಸುಮಾರು 200ಕ್ಕೂ ಹೆಚ್ಚು ಪಶುಗಳಿಗೆ ತಪಾಸಣೆಯ ಜೊತೆಗೆ ಚಿಕಿತ್ಸೆಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟದ ಅಧಿಕಾರಿಗಳು, ಪಶು ವೈದ್ಯರು, ಸುಮಾರು 50ಕ್ಕೂ ಹೆಚ್ಚು ಶಿಬಿರಾರ್ಥಿಗಳು ಮತ್ತು ಗ್ರಾಮಸ್ಥರು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



### ಬುದ್ಧಿಮಾಂದ್ಯ ಮಕ್ಕಳಿಗೆ ವಿವಿಧ ತರಬೇತಿ

ಕೃಷ್ಣ ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಿಕ್ಷಣ ವಸತಿ ಶಾಲೆ, ಹಳೇ ಬೈರೋಹಳ್ಳಿಯಲ್ಲಿ ಬುದ್ಧಿವಮಾಂದ್ಯ ಮಕ್ಕಳಿಗೆ ವಿವಿಧತರಬೇತಿ ನೀಡುವುದರ ಜೊತೆಗೆ ಶಾಲಾ ಆವರಣವನ್ನು ಮತ್ತು ಸುತ್ತಮುತ್ತಲಿನ ಪರಿಸರವನ್ನು ಶುಚಿಗೊಳಿಸುವ ಕಾರ್ಯವನ್ನು ಎನ್.ಎಸ್.ಎಸ್. ಘಟಕ ಹಮ್ಮಿಕೊಂಡಿತ್ತು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

**ಯಲಹಂಕ, ಬೆಂಗಳೂರು**



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕವು 2016-17ನೆಯ ವಿಶೇಷ ವಾರ್ಷಿಕ ಶಿಬಿರವನ್ನು ಕಾರ್ಯಕ್ರಮಾಧಿಕಾರಿ ಎನ್.ಟಿ. ತಿಮ್ಮಪ್ಪ ನೇತೃತ್ವದಲ್ಲಿ ದಿನಾಂಕ 20 ರಿಂದ 26 ಫೆಬ್ರವರಿ 2017 ರವರೆಗೆ ಎಸ್.ಎಸ್. ಘಾಟಿ ಗ್ರಾಮದಲ್ಲಿ ಆಯೋಜಿಸಿತ್ತು.



ದೇವನಹಳ್ಳಿ ವಿಧಾನಸಭಾಕ್ಷೇತ್ರದ ಶಾಸಕ ಪಿಳ್ಳಮುನಿಸ್ವಾಮಪ್ಪ ಉದ್ಘಾಟಿಸಿದರು. ಆಚಾರ್ಯ ಗುರೂಜಿ ವಿನಯ್ ವಿನೇಕರ್, ಜಿಲ್ಲಾ ಪಂಚಾಯತ್ ಸದಸ್ಯ ಹೆಚ್. ಅಪ್ಪಯ್ಯ, ಶಿಕ್ಷಣ ತಜ್ಞ ಎಸ್. ವೀರಭದ್ರಯ್ಯ, ಸೇವಕ ಸಂಸ್ಥೆಯ ಸೊಣ್ಣಪ್ಪ ಭಾಗವಹಿಸಿದ್ದರು.

ಶಿಬಿರದಲ್ಲಿ ಸ್ವಯಂ ಸೇವಕರು ಘಾಟಿ ದೇವಾಲಯದ ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಳ್ಳುವದರೊಂದಿಗೆ ಸ್ವಚ್ಛತೆಯ ಬಗ್ಗೆ ಜನರಿಗೆ ಅರಿವು ಮೂಡಿಸಿ, ದೇವಾಲಯ ಮತ್ತು ಸರ್ಕಾರಿ ಶಾಲೆಯ ಆವರಣವನ್ನು ಸ್ವಚ್ಛಗೊಳಿಸಿ ಅಲ್ಲಿನ ಶಾಲಾ ಮಕ್ಕಳಿಗೆ ಅನುಕೂಲವಾಗುವಂತೆ ಕಲ್ಲಿನ ಮೆಟ್ಟಿಲುಗಳನ್ನು ಕಟ್ಟಿದರು. ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ತೂಬಗೆರೆ ಹೋಬಳಿಯ ಉಪತಹಸಿಲ್ದಾರ್ ನಾರಾಯಣಸ್ವಾಮಿ, ಕಂದಾಯ ನಿರೀಕ್ಷಕರು ಗಿರೀಶ್ ಭಾಗವಹಿಸಿದ್ದರು. ಡಾ॥ ಆರ್. ಶ್ರೀನಿವಾಸ್‌ರವರು ಎನ್.ಎಸ್.ಎಸ್. ಸಂಯೋಜನಾಧಿಕಾರಿ ಬೆಂಗಳೂರು ವಿಶ್ವವಿದ್ಯಾಲಯ ಸಮಾರೋಪ ಸಮಾರಂಭದ ಭಾಷಣ ಮಾಡಿದರುಎಲ್ಲ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ॥ ಎಸ್.ಎನ್. ವೆಂಕಟೇಶ್ ವಹಿಸಿದ್ದರು.

# *On a Lighter note*

*but, seriously...*






























**ತಾಯಿ ಕನಿಮನೆಯೆ, ನೀ ಅಕ್ಕ ಅಕ್ಕರತೆಯೆ, ಬಾ ಎನ್ನ ತಂಗಿ ಬಾ, ಮುದ್ದು ಬಂಗಾರವೇ, ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ, ಮಗಳೋ ನನ್ನೆದೆಯ ಮುಗುಳೊ? - ದ.ರಾ. ಬೇಂದ್ರೆ**